ಕಡೂರು ಡಿಸ್ಟ್ರಿಕ್ಟ್.

ತಾರೀಖು 2ನೇ ಜುಲೈ 1889.

ಕಡೂರು ಡಿಸ್ಟ್ರಿಕ್ಟ್ ಕಡೂರು ತಾ॥ ಸಬ್ ರೆಜಿಸ್ಟ್ರಾರ್‌ರವರ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ಜೇವಾರಸು ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸುದಾರಾಗಲಿ ಆಥವಾ ಅಧಿಕಾರಹೊಂದಿದ ಮುಕ್ತಾರೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾಪಸು ವಡೆಯದೇ ಹೋದರೆ 1877ನೇ ಇಸವಿ IIIನೇ ನಂಬರ್ ಇಂಡ್ಯೂ ರೆಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್	ದಸ್ತಾವೇಜು ಬರೆದು ಕೊಟ್ಟವರ ಹೆಸರು.	ದಸ್ತಾವೇಜು ಬರೆಸಿಕೊಂಡವರ ಹೆಸರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಬೇಕೆಂದು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
IIನೇ ಬುಕ್ಕು 3 ——— 87—88	ಕಡೂರು ತಾ॥ ದೊಡ್ಡ ದೇವನೂರು ವಾಸಿ ಪೆಸ್ತರ ಸಂಣಂಕರಿನ ಮಗ ಯಲ್ಲಯನ ಮಗ ಹನುಮಂತ	ದೇವನೂರು ವಾಸಿ ಪೆಸ್ತರ ದಾಸನ ಮಗ ಯರೆಹಳ್ಳಿ ಜಸ್ತರ	30—4—86		30—6—87	ಇದೇ ದೇವನೂರು ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 25–27 ಮತ್ತು ಈ ಪೈಕಿ ಹೊಲಕ್ಕೆ ಎಕ್ರೆ 3—8 ಆ ಕಾರ 3—8 ಬಾಬತು ಮತ್ತು ನಂ. 120ನೇ ತರಿ ಇವು ಪಿತರಾರ್ಜಿತವಾಗಿ ಕೆರಭಂಡಿ ಚಾಕರಿ ಸಂಬಂಧದ ಜಗೀರ್‌ಗಳಾಗಿರುತ್ತದೆ. ನಾನು ಚಾಕರಿ ಮಾಡಲಾರದೆ ನೀನೆ 20 ವರುಷಗಳಿಂದ ಅನುಭವಿಸುತ್ತಾ ಬಂದಿರುತ್ತಿ ಆದ ಕ್ರಯುಕ್ತ ಈಚಿಗೆ ಆದ ಆಫೀಸ್ ಪಂಚಾಯಿತರ ಜೇಳಿಕೆಗೆ ಒಪ್ಪಿಕೊಂಡು ಸದರೀ ಸ್ವತ್ತುಗಳ ಮೇಲೆ ಇದ್ದ ಹಕ್ಕುದಾರಿಯಲ್ಲ ತ್ಯಜಿಸಿ ವಹಿಸಿಕೊಟ್ಟಿರುತ್ತಾನೆ.
IIನೇ ಬುಕ್ಕು 4 ——— 87—88	ಪಟ್ಟಣಗೆರೆ ಮಾಗಣಿ ಸರಸ್ವತೀಪುರದ ಕೆಂಚಬಾಲ	ಪಟ್ಟಣಗೆರೆ ಹಿರಿಯಂಣಪ್ಪನವಕ್ಕಳು ಸಾಹುಕಾರು ರಂಗಂಣನವರು	6—7—86		30—6—87	ಇದೇ ಮಾಗಣಿ ಕಾಟಾಪುರ ಗ್ರಾಮದ ಸರ್ವೆ ನಂ. 27ನೇ ಖುಷ್ಕಿ ಜಮೀನನ್ನು 40 ರೂಪಾಯಿಗೆ ನಿವ್ಯ್ರತಂದೆ ಹಿರಿಯಂಣಪ್ಪನವರಿಂದ ಕ್ರಯಕ್ಕೆ ಪಡದು ಆ ಬಾಬತು ಮೊಬಲಗು ಪೂರ್ತಿ ಮಾಡುವವರಿಗೆ ಚಿಕ್ಕಂಗಳ ಮಾಗಣಿ ಚನ್ನೇನಹಳ್ಳಿ ಗ್ರಾಮದ ಸರ್ವೆ ನಂಬರು 48ರ ಪೈಕಿ 2ನೇ ನಂ. ಎಕ್ರೆ 6 ಆ ಕಾರ 5—12 ಬಾಬತು ಜಮೀನನ್ನು ಅನುಭವಿಸುತ್ತಿರಬೇಕಾಗಿ ಕೊಟ್ಟಿದ್ದೇನಪ್ಪ ಈಗ ನೀವು ಹಣಕ್ಕೆ ತಗಾದೆ ಮಾಡಿದ್ದರಿಂದ ಸದರೀ ಗೋಡೆಹೊಲವೆಂಬ ಜಮೀನನ್ನೆ ಸದರಿ ಮೊಬಲಗ್ಯೆ ಕ್ರಯಕ್ಕೆ ಕೊಟ್ಟಿದ್ದೇನೆಂತ.

ಜಿ. ಜಿ. ಮೈಕಲ್‌ಜಾರ್,
ರಿಜಿಸ್ಟ್ರಾರ್.

ಮೈಸೂರ ಗೆಜೆಟ್ ಚಂದಾ ದರ ನಗ್ಯೆರೆ.

ತಾರೀಖು 26ನೇ ಜನವರಿ 1889.

ಮೈಸೂರು ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳು ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಹೊರತು ಇತರ ಸ್ಥಳಗಳಿಗೆ ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	4 8
ಫಸ್ಟ್ ಮಾಹೆ ಯಾ ಕ್ವಾರ್ಟರಿಗೆ	ದಾಮೋದಾಯಿ ಪ್ರಕಾರ ದರಗಳು.	
ಚಾಲತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯೂಲೇರ್ಸ್ ಯಾ ಆಕ್ಟ್ಸುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಬಾಬ್ತು ಕೇಳಿ ತಿಳಿದುಕೊಳ್ಳಬಹುದು.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಸು ಅನುಸರಿಸಿ ಸರ್ಟಿಫಿಕೇಟ್ ಬ್ಯೈ ನೋಟೀಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬ್ಯೈ (ಇಂಗ್ಲೀಷು ಅಥವಾ ಕನ್ನಡ)	..	2 8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	..	1 4

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್ನುಗಳ ಬ್ಯೈ ನೋಟೀಸುಗಳಿಗೆ:—

ಮೊದಲನೇ ಸಲಕ್ಕೆ	..	..	5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	..	2 8

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲಾಡುವ ದಿವಾಳೀ ಹುಕ್ಕುಂಗಳು ಬಿಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಪ್ಯುಬ್ಲಿಕೇಷನ್ ಕಾಫೀಪಟ್ಟಿ ವಗೈರೇ ಕೊಡುವ ಬಗ್ಯೆ ರವಿನ್ಯೂ ಆಫಿಸರಗಳು ಕೊಡುವ ನೋಟೀಸುಗಳಿಗೆ :—

ಮೊದಲನೇ ಸಲಕ್ಕೆ	..	ಫುಟ 1ಕ್ಕೆ ..	10 0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ		„ ..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಜ್ತಿ 1ಕ್ಕೆ .	0 8
ಎರಡನೇ ದಫಾ	ಡಿಟೊ	ಡಿಟೋ ..	0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0 4

ಪರಾ.—ಚಂದಾ ವಗೈರೇ ಬ್ಯೈ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟ್ಯಾಗ ರೂಪಾಯಿಗೆ ಎಂದಾಣೆ ಯಂತೆ ಪಾಸ್ಟ್ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ಮೆಂಟ್ ಆರ್ಡರ್ ಪ್ರಕಾರ ತವಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜ್‌ಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರ್ಖಾಸ್ತುಗಳು ಮೈಸೂರು ದಿವಾನರವರ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಿಂದ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರು ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತವಾಂ ನೋಟಿಸ್ ವ ಇನ್ಸ್ತಿಹಾರ್‌ನಾಮೆಗಳು ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಗುರುವಾರ ದಿವಸ ಸಾಯಂಕಾಲ 5 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಯಿಲ್ಲ.

ಟಿ. ಟಿ. ಲಿನಾರ್ಡ್,
ಮೈ. ಗೆ. ಕಂಪೈಲರ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫಿಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲಿಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಿಂದ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಿಂದ ಕಂಡ ದರ ಪ್ರಕಾರ ನಗದೀನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 4—14—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0, ಒಂದು ಪೌಂವುಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲಿಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Govt. Central Press, Bangalore.—1889.